ಇಲ್ಲ. ಅಂತಹ ವ್ಯವಸ್ಥೆಗಳ ಕಡೆ ತಾವು ಲಕ್ಷ್ಯ ಕೊಟ್ಟು ಕೆಲಸ ಮಾಡಿದ್ದೇ ಆದರೆ ತಾವು ಕೂಡ ಸಚಿವರಾಗಿದ್ದಕ್ಕೆ ಸಾರ್ಥಕವಾಗುತ್ತದೆ. ಈ ಸದನದಲ್ಲಿ ಪ್ರತಿಯೊಬ್ಬ ಸದಸ್ಯರು ಕೊಡತಕ್ಕಂತಹ ಸಲಹೆಗಳೇನು ಇವೆ ಅದನ್ನು ಗೌರವ ಪೂರ್ವಕವಾಗಿ ಪರಿಶೀಲಿಸಿ ತಾವು ಪರಿಹಾರ ಒದಗಿಸಿಕೊಡಬೇಕೆಂದು ನಾನು ಮತ್ತೊಂದು ಸಲ ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಈಗ ಸದನವನ್ನು ಮುಂದೂಡಿ ಮತ್ತೆ 3-00 ಗಂಟೆಗೆ ಸಭೆ ಸಮಾವೇಶಗೊಳ್ಳುವುದು.

(ಸದನವು 1-50 ಕ್ಕೆ ಮುಕ್ತಾಯವಾಗಿ ಮತ್ತೆ 3-00 ಗಂಟೆಗೆ ಸೇರುವುದು)

ಸಭೆಯು ಪುನಃ 3-30ಕ್ಕೆ ಸಮಾವೇಶಗೊಂಡಿತು

(ಪೀಠದಲ್ಲಿ ಉಪಾಧ್ಯಕ್ಷರು ಉಪಸ್ಥಿತರಿದ್ದರು)

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಪ್ರಾರ್ಥನೆ ಇದೆ, ಮತ್ತು ತುಂಬಾ ದಿನದಿಂದ ಆಸೆ ಇದೆ. ಒಂದು ಬಾರಿ ಪತ್ರಿಕೆಯವರ ಮೂಲಕ ರಾಜ್ಯದ ಜನರಿಗೆ ಪರಿಚಯ ಆಗಬೇಕು. 45 ಜನ ಸಚಿವರು ಒಟ್ಟಿಗೆ ಇದ್ದಂಥ ಒಂದು ದೃಶ್ಯವನ್ನು ನೋಡಬೇಕು ಎಂದು ಏಕೋ ಏನೋ ಒಂದು ಮಹಾದಾಸೆ. ತಾವು ಅದನ್ನು ಯಾವಾಗ ಕಲ್ಪಿಸಿ ಕೊಡುತ್ತೀರಾ? ನಾನು ತಮಾಷೆ ಮಾಡುತ್ತಿಲ್ಲ. ನಾನು ಆ ದೃಶ್ಯವನ್ನು ನೋಡಿ ಆನಂದಪಡಬೇಕು, ಪತ್ರಿಕೆ ಮೂಲಕ ರಾಜ್ಯದ ಜನರಿಗೆ ಗೊತ್ತಾಗಬೇಕು. ಈ ದಿನಾ ನಾಲ್ಕು ಜನರಿದ್ದಾರೆ ಎಂದು ಪತ್ರಿಕೆಯವರು ಬರೆಯುತ್ತಾರೆ....

ಉಪಾಧ್ಯಕ್ಷರು :- ಈಗ 45 ಜನ ಮಂತ್ರಿಗಳು ಒಟ್ಟಿಗೆ ಇರುವುದಕ್ಕಾಗುವುದಿಲ್ಲ, ವಿಧಾನಪರಿಷತ್‌ನಲ್ಲೂ ಕೂಡ ಮಂತ್ರಿಗಳು ಇರಬೇಕಾಗುತ್ತದೆ....

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾನು ಬೆಳಿಗ್ಗೆ 10-30ಕ್ಕೆ ಆ ದೃಶ್ಯವನ್ನು ಒಟ್ಟಿಗೆ ನೋಡಿಬಿಡೋಣ ಅಂತ. ಇದನ್ನು ನಾನು ಬೇರೆ ರೀತಿಯಲ್ಲಿ ಹೇಳಿದರೂ ಸಹ ಇದು ಖಂಡಿತ ಶೋಭೆ ತರುವುದಿಲ್ಲ. ಉಪಾಧ್ಯಕ್ಷರೇ, ಎಷ್ಟು ಸಾರಿ ನಾವು ಹೇಳುವುದು, ಪರಿಸ್ಥಿತಿ ಹೀಗಿದ್ದರೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದು ಹೇಗೆ? ಅದಕ್ಕೆ ಮಹತ್ವ ಕೊಡುವಂಥದ್ದು, ಅದನ್ನು ಇಂಪ್ಲಿಮೆಂಟ್ ಆಗುವಂಥದ್ದು ಏನಾದರೂ ಸಾಧ್ಯನಾ?

ಶ್ರೀ ವಾಟಾಳ್ ನಾಗರಾಜ್ :- ಉಪಾಧ್ಯಕ್ಷರೇ, ಈ ಸದನಕ್ಕೆ ಎಷ್ಟೊಂದು ಗಾಂಭೀರ್ಯ ಇರಬೇಕು, ಎಷ್ಟೊಂದು ಗೌರವ ಇರಬೇಕು, ನಮ್ಮ ಸದಸ್ಯರಿಗಳಿಗೂ ಹೇಳುತ್ತೇನೆ, ಕೆಲವು ಸದಸ್ಯರುಗಳಿಗೆ ಈ ಸದನವನ್ನು ಕಂಡರೆ ಆಗುವುದೇ ಇಲ್ಲ. ಮಂತ್ರಿಗಳಂತೂ ಸದನವನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆ, ಮರೆತ್ತಿದ್ದಾರೆ. ಇದು ನಿಜವಾಗಿಯೂ ಪ್ರಜಾಪ್ರಭುತ್ವಕ್ಕೆ ಅಪಚಾರವೆಸಗಿದಂತಾಗುತ್ತದೆ, ಇದು ಒಳ್ಳೆಯ ನೀತಿಯಲ್ಲ. ಉಪಾಧ್ಯಕ್ಷರೇ, ಶೂನ್ಯವೇಳೆಯಲ್ಲಿ ಮಾತನಾಡುವುದಕ್ಕೆ ಎದ್ದರೆ ಎರಡೆರಡು ನಿಮಿಷ, ಮೂರು ಮೂರು ನಿಮಿಷ ಎಂದು ನೀವು ಹೇಳುತ್ತೀರಿ, ಗಂಟೆಗಟ್ಟಲೆ ಗಂಟೆ ಬಾರಿಸಿದರೂ ಜನ ಒಳಗೆ ಬರುವುದಿಲ್ಲ, ನೀವು ಮಾತನಾಡುವುದಕ್ಕೆ ಅವಕಾಶವನ್ನೂ ಕೊಡುವುದಿಲ್ಲ, ಪರಿಸ್ಥಿತಿ ಹೀಗೆ ಆದರೆ ಹೇಗೆ? ತಮಗಾದರೂ ಈ ಸದನದ ಸಂಪೂರ್ಣ ಸಾರ್ವಭೌಮತ್ವ ಇದೆ, ತಾವು ಇವರಿಗೆ ಸ್ಪಷ್ಟವಾಗಿ ಹೇಳಿ.

ಉಪಾಧ್ಯಕ್ಷರು :- ಈಗಾಗಲೇ ಸಚೇತಕರು ಮಂತ್ರಿಗಳನ್ನು ಕರೆತರುವುದಕ್ಕೆ ಹೋಗಿದ್ದಾರೆ, ಈಗ ಪಾಟೀಲರು ಮಾತನಾಡಲಿ.

ಶ್ರೀ ಯು. ಆರ್. ಸಭಾಪತಿ :- ಮೊದಲ ಸಾಲಿನಲ್ಲಿ ಒಬ್ಬರೇ ಒಬ್ಬರು ಮಂತ್ರಿಗಳಿಲ್ಲ,

ಶ್ರೀ ಬಿ. ಎಸ್. ಸೋಮಶೇಖರ್ :- ನಾವು ಬರೆದುಕೊಳ್ಳುತ್ತೇವೆ ಅವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ಸೋಮಶೇಖರ್ ರವರು ಹೇಳುತ್ತಾರೆ, ನಾವು ಬರೆದುಕೊಂಡುಬಿಡುತ್ತೇವೆ, ನೀವು ಮಾತನಾಡಿ ಎಂದು. ನೀವೂ ಬರೆದುಕೊಳ್ಳಬೇಕಾಗಿಲ್ಲ, ಏಕೆ ಬರೆದುಕೊಳ್ಳಬೇಕು, ನನಗೆ ಅರ್ಥವಾಗಲಿಲ್ಲ, ಯಾವ ಪರುಷಾರ್ಥಕ್ಕಾಗಿ ಎಂಬುದನ್ನು ತಾವೇ ಹೇಳಿ. ಏಕೆಂದರೆ ಪಾಪ ಹಿಂದೆ ನೀವು ಇದನ್ನೆಲ್ಲ ನೋಡಿದ್ದೀರಿ, ಏಕೆ ನೀವು ಈ ತರಹ ಮಾತನಾಡುತ್ತೀರಿ ನನಗೆ ಬಹಳ ನೋವಾಯಿತು.

ಉಪಾಧ್ಯಕ್ಷರು :- ಈಗ ಭೈರೇಗೌಡರು ಬಂದರು, ಎಲ್ಲರೂ ಬರುತ್ತಿದ್ದಾರೆ.....

ಶ್ರೀ ವಾಟಾಳ್ ನಾಗರಾಜ್ :- ಉಪಾಧ್ಯಕ್ಷರೇ, ಈಗ ಭೈರೇಗೌಡರು ಬಂದರೆ 25 ಜನ ಮಂತ್ರಿಗಳು ಬಂದಂತಾಗುತ್ತದೆಯೇ? ಉಪಾಧ್ಯಕ್ಷರೇ, ಇದೇ ಭೈರೇಗೌಡರು ಇಲ್ಲಿ ಕುಳಿತ್ತಿದ್ದಾಗ ಒಂದು ದಿನಕ್ಕೆ ನೂರು ಸಾರಿ ಮೇಲಕ್ಕೆ ಏಳುತ್ತಿದ್ದರು;

ಶ್ರೀ ಎ. ಭೈರೇಗೌಡ :- ಅವೊತ್ತು ಹೇಳುವುದೇ ಇವೊತ್ತು ಹೇಳುವುದೇ ಅದಕ್ಕೋಸ್ಕರ ಈಗ ಎದ್ದು ನಿಂತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಅವರ ಆತ್ಮವನ್ನು ವಿರೋಧಪಕ್ಷ ದಲ್ಲಿದ್ದಾಗ ಇಲ್ಲೇ ಬಿಟ್ಟು ಅಲ್ಲಿಗೆ ಹೋಗಿದ್ದಾರೆ. ಆತ್ಮ ಇದ್ದರೆ ಅಲ್ಲಿಗೆ ಹೇಗೇ ಹೋಗಿ ಕುಳಿತುಕೊಳ್ಳುತ್ತಾರೆ.

ಉಪಾಧ್ಯಕ್ಷರು :- ಇಲ್ಲ ಸರ್ಕಾರದ ಅಧಿಕಾರಿಗಳಿದ್ದಾರೆ, ಮಂತ್ರಿಗಳು ಕೆಲವು ಜನ ಬಂದಿದ್ದಾರೆ, ಇನ್ನೂ ಬರುವವರಿದ್ದಾರೆ ತಾವು ಪ್ರಾರಂಭ ಮಾಡಿ ಪಾಟೀಲರೆ.

ಶ್ರೀ ಸಿ. ಬೈರೇಗೌಡ :- ಇಲ್ಲಿ ಯಾರು ಮಂತ್ರಿಗಳಿಲ್ಲ ಎಂಬುದು ಗೊತ್ತಾಯಿತು ಆ ಬಗ್ಗೆಯೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ, ವಿದ್ಯುಚ್ಛಕ್ತಿಯ ಬಗ್ಗೆ ನಮ್ಮ ಕೆಲವು ಮಂತ್ರಿಗಳು ಸೇರಿಕೊಂಡು ಯಾವರೀತಿಯಾಗಿ, ಏನು ಮಾಡಬೇಕು ಎಂಬ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಆದರಲ್ಲಿ ಉಪಮುಖ್ಯಮಂತ್ರಿಗಳು, ಇನ್ನುಳಿದ ಕೆಲವು ಮಂತ್ರಿಗಳೂ ಕೂಡ ಆ ಚರ್ಚೆಯಲ್ಲಿ ಭಾಗವಹಿಸಿ ಆದನ್ನು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಪರಿಶೀಲನೆ ಇದ್ದರೆ ಸಭೆಯನ್ನು ಮುಂದಕ್ಕೆ ಹಾಕಲಿ.

ಶ್ರೀ ಸಿ. ಬೈರೇಗೌಡ :- ಇಲ್ಲಿ ನಾವಿದ್ದೇವಲ್ಲ, ಆವರು ಬೇರೆ ಕಡೆ ಇದ್ದಾರೆ, ಬರುವವರಿದ್ದಾರೆ..

ಶ್ರೀ ವಾಟಾಳ್ ನಾಗರಾಜ್ :- ಭೈರೇಗೌಡರು ಏನು ಹೇಳುತ್ತಾರೆ, ನಾವಿದ್ದೇವೆ ಎಂದು....

ಶ್ರೀ ಸಿ. ಬೈರೇಗೌಡ :- ಎಲ್ಲರೂ ಇನ್ನೇನು ಬರುತ್ತಾರಾದ್ದರಿಂದ ದಯವಿಟ್ಟು ಚರ್ಚೆ ಮುಂದುವರಿಯಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾನು ಒಂದು ಜವಾಬ್ದಾರಿ ಸ್ಥಾನದಲ್ಲಿ ನಿಂತು ತಮಗೆ ಒಂದು ವಿನಂತಿಯನ್ನು ಮಾಡುತ್ತೇನೆ, ಸಂಪೂರ್ಣ ಮಂತ್ರಿಮಂಡಲವನ್ನು ನಾವು ಕಣ್ಣಿನಿಂದ ನೋಡಿ ಆನಂದ ಪಡಬೇಕು; ಯಾವಾಗ ವ್ಯವಸ್ಥೆಯನ್ನು ಮಾಡಿ ಕೊಡುತ್ತೀರಾ ಹೇಳಿ. ಆದಕ್ಕೆ ನನಗೆ ಅಧಿಕಾರ ಇಲ್ಲವೇ? ದಯಮಾಡಿ ನೀವು ಒಂದು ಸಮಯವನ್ನು ನಿಶ್ಚಯ ಮಾಡಿ ಆಗ ನಿಮಗೆ ಅರ್ಥವಾಗುತ್ತದೆ, ಎಷ್ಟು ಜನ ಆವರ ಪರ ಇದ್ದಾರೆ, ವಿರೋಧ ಇದ್ದಾರೆ, ಒಟ್ಟಾಗಿ ಇದ್ದಾರೊ ಅಥವಾ ಇಲ್ಲವೊ ಆದಾದರು ನಮಗೆ ಗೊತ್ತಾಗುತ್ತದೆ. ದಯಮಾಡಿ ನೀವು ಸಮಯವನ್ನು ನಿಗಧಿ ಮಾಡಿ, ಬೇಕಾದರೆ ಮೇಲ್ಮನೆ ನಡೆಯದೇ ಇರುವಂಥ ಸಮಯದಲ್ಲಿ ಬೇಕಾದರೆ ಸಮಯವನ್ನು ನಿಗಧಿ ಮಾಡಿ 45 ಜನ ಇಲ್ಲಿ ಬಂದು ಕುಳಿತುಬಿಟ್ಟರೆ ನೀವು ಹೇಳಿದಹಾಗೆ ನಾನು ಕೇಳುತ್ತೇನೆ.

ಉಪಾಧ್ಯಕ್ಷರು :- ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಬಂದಕೂಡಲೇ ಆ ಬಗ್ಗೆ ವ್ಯವಸ್ಥೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :- ಮತ್ತೊಂದು ವಿಚಾರ ಇನ್ನೇನಿಲ್ಲ... ಈ ಮೊಗಸಾಲೆಯಲ್ಲ ಊಟ ಮಾಡುವುದನ್ನು ದಯಮಾಡಿ ಸ್ವಲ್ಪ ತಪ್ಪಿಸಿ, ಯಾರೇ ಮಂತ್ರಿ ಗಳಾಗಲಿ ಕೈಮುಗಿದು ಕೇಳುತ್ತೇನೆ ಏಕೆಂದರೆ ಇದು ಇರುವುದು ಸುಂದರವಾಗಿ ಈ ಶಾಸನಸಭೆಯ ಆ ಕಡೆ ಈ ಕಡೆ ಇಕ್ಕೆಲಗಳಲ್ಲಿ ಕುಳಿತು ಸಂತೋಷವಾಗಿ ಮಾತನಾಡುವುದಕ್ಕಾಗಿ ಇರುವಂಥದ್ದು,.....

ಉಪಾಧ್ಯಕ್ಷರು :- ಇನ್ನು ಮುಂದೆ ಆ ಬಗ್ಗೆ ವ್ಯವಸ್ಥೆ ಮಾಡೋಣ.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರು ಅಲ್ಲಿ ಊಟದ ವ್ಯವಸ್ಥೆಯನ್ನು ಮಾಡುವುದಕ್ಕೆ ಆಪ್ಷಣೆಯನ್ನು ಕೊಟ್ಟಿರಲಿಲ್ಲ, ಇಲ್ಲಿ ಮಾಡುವುದು ಬೇಡ ಆದರ ಬದಲು ಕಾನ್ಫರೆನ್ಸ್ ಹಾಲ್‌ನಲ್ಲಿ ಮಾಡಿ, ಶುಚಿಯಾಗಿಡುವುದಿಲ್ಲ ಬೇಡ ಎಂದರು. ಆದರೆ ಕಾನ್ಫರೆನ್ಸ್‌ಹಾಲ್ ಒಂದು ವಾರಕ್ಕೆ ಮೊದಲೇ ಆದು ಬುಕ್ ಆಗಿಬಿಟ್ಟಿತ್ತು, ಬ್ಯಾಕ್ವೆಂಟ್ ಹಾಲ್‌ನಲ್ಲಿ ಮಾಡಿದರೆ ಯಾರು ಬೇಕೂ ಅವರೆಲ್ಲಾ ನುಗ್ಗುತ್ತಾರೆ ಅಲ್ಲಿ ತಡೆಯುವುದಕ್ಕೆ ಸಾಧ್ಯವಿಲ್ಲ ಎಂದು ಇವೊತ್ತು ಮಾತ್ರ ವಿಶೇಷವಾಗಿ ಅದನ್ನು ತೆಗೆದುಕೊಂಡಿರುವುದು, ಇನ್ನು ಮುಂದೆ ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಾನು ಬಚ್ಚೇಗೌಡರು ಮಾಡಿದರು ಎಂದು ಹೇಳುತ್ತಾ ಇಲ್ಲ, ಇಲ್ಲಿ ಎಲ್ಲರೂ ಮಾಡುತ್ತಿದ್ದಾರೆ, ಎಲ್ಲಾ ಸಚಿವರು ಎರಡೂ ಕಡೆಯು ಊಟದ ವ್ಯವಸ್ಥೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ, ಈ ಸದನದ ಒಂದು ಅಂದಚೆಂದ ಕೆಡುತ್ತದೆ ಆದು ಆಗಬಾರದು ಎನ್ನತಕ್ಕಂಥದ್ದು ನನ್ನ ಉದ್ದೇಶ. ಆದಕ್ಕೆ ಶ್ರಮವಹಿಸಿ ಈ ಸದನವನ್ನು ಕಟ್ಟಿದಂತಹವರು ಅವರ ಭಾವಚಿತ್ರವನ್ನು ಇಲ್ಲೆ ಹಾಕಿಕೊಂಡಿದ್ದೇವೆ, ಆದರ ಪಕ್ಕದಲ್ಲೆ ಕುಳಿತುಕೊಂಡು ಈ ರೀತಿ ವ್ಯವಸ್ಥೆ ಮಾಡಿದರೆ ಆದು ಸರಿ ಕಾಣುವುದಿಲ್ಲ. ಇದನ್ನು ಸಾಮಾನ್ಯವಾಗಿ ಎಲ್ಲರಿಗೂ ಹೇಳುತ್ತಿದ್ದೇನೆ. ಈಗಾಗಲೇ ಇಲ್ಲಿ 8-10 ನಡೆದು ಹೋಯಿತು. ಮತ್ತು ಅಲ್ಲಿ ಒಂದು ಮರದ ಸುಂದರ ಕೆತ್ತನೆಯ ಆನೆ ಇತ್ತು ಆದು ಏನಾಯಿತೆಂದು ಗೊತ್ತಿಲ್ಲ. ಇದಕ್ಕೆ ಯಾರು ಜವಾಬ್ದಾರರು? ಈ ವಿಧಾನಸೌಧದ ಜವಾಬ್ದಾರಿ ಯಾರದು? ಇದು ಏನು ಪರಿಸ್ಥಿತಿ? ಈ ಸದನದ ಜವಾಬ್ದಾರಿ ಯಾರದು? ನಿಮ್ಮ ಇಲಾಖೆಯವರು ಆದನ್ನು ನೋಡಿಕೊಳ್ಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ :- ಆದನ್ನು ವಿಧಾನಸೌಧದ ವೀರಪ್ಪನ್ ತೆಗೆದುಕೊಂಡು ಹೋಗಿದ್ದಾನೆ.

ಉಪಾಧ್ಯಕ್ಷರು :- ಬೇರೆ ಕಡೆ ಎಲ್ಲಾದರೂ ಇಟ್ಟಿರಬಹುದು.

ಶ್ರೀ ವಾಟಾಳ್ ನಾಗರಾಜ್ :- ಅಲ್ಲಿ ಹಾಸಿರುವಂತಹ ರಗ್ಗುಗಳು ಹರಿದು